doc-127
T-P-2

SATYAVADI Founded 1917 Regd. No. M 1299

ಸತ್ಯವಾದಿ

(ಅದಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 169] ಶನಿವಾರ 16—3—46 [ಬಿಡಿ ಪ್ರತಿ 3 ಪೈ

ಶ್ರೀ ಚನ್ನಯ್ಯನವರಿಗೆ ಮಹದಿಜಯ

ಮೈಸೂರು, ಮಾ 16 — ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನವಸ್ಯ ಆಯ್ಕೆಯ ಬಗ್ಗೆ ಮೈಸೂರಿನಿಂದ ನಿನ್ನೆಯ ದಿವಸ ಚುನಾವಣೆ ನಡೆಯಿತು. ಶ್ರೀಮತ್ ದಾಸಪ್ಪನವರಿಗೆ ಹೆಚ್ಚು ಮತಗಳು ಬರಬಹುದೆಂದು ಕಾಂಗ್ರೆಸ್ ಕಛೇರಿಯ ವಾತಾವರಣ ತಿಳಿಸುತ್ತಿದ್ದಿತು. ಆದರೆ ಚುನಾವಣೆಯಲ್ಲಿ ಉಮೇದುವಾರರಾಗಿದ್ದ ಶ್ರೀಮತ್ ಪಿ ವಿ. ನಾರಾಯಣ ಮೂರ್ತಿಗಳು ತಮ್ಮ ಸ್ಪರ್ಧೆಯನ್ನು ಸಾಹುಕಾರ್ ಶ್ರೀಮತ್ ಚನ್ನಯ್ಯನವರಿಗಾಗಿ ಬಿಟ್ಟು ಕೊಟ್ಟರು. ಮತದಾನವಾದನಂತರ ಮತಗಳ ಎಣಿಕೆಯಾಗಲು ಸಾಹುಕಾರ್ ಶ್ರೀಮತ್ ಚನ್ನಯ್ಯನವರಿಗೆ 33 ಮತಗಳು ದೊರೆತು ಪುಹದ್ವಿಜಯವಾಯಿತು. ಶ್ರೀಮತ್ ದಾಸಪ್ಪನವರಿಗೆ ಕೇವಲ 14 ಮತಗಳು ದೊರೆತವು. ಪೌರಸಭೆಯ ಕಾಂಗ್ರೆಸ್ ಪಕ್ಷದ 22 ಸದಸ್ಯರುಗಳೂ ಸಾಹುಕಾರ್ ಶ್ರೀಮತ್ ಚನ್ನಯ್ಯನವರಿಗೇ ಮತದಾನ ಮಾಡಿದರು.

ನ್ಯಾಯಾಧಿಕಾಯಕ ಸಭೆಯ ಸದಸ್ಯರಾದ ಶ್ರೀ ಹೆಚ್. ಎಂ. ಚನ್ನ ಬಸಪ್ಪನವರ ಧರ್ಮಪತ್ನಿ ಶ್ರೀಮತಿ ನಂಜಮ್ಮನವರು ಮೊನ್ನೆ ರಾತ್ರಿ ಚಲುವಾಂಬ ಹೆರಿಗೆ ಆಸ್ಪತ್ರೆಯಲ್ಲಿ ಹೆರಿಗೆಯಾದನಂತರ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಮೃತರಿಗೆ ಮೂರು ಜನ ಗಂಡು ಮಕ್ಕಳಿರುವರು ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಆಹಾರ ಸಾಗುವುದನ್ನು ತಪ್ಪಿಸುವ ಸಲುವಾಗಿ ರಾತ್ರಿಯು ವೇಳೆ ಖಾಸಗೀ ಲಾರಿಗಳು ಓಡಾಡಕೂಡದೆಂದು ತುಮಕೂರು ಜಿಲ್ಲಾಧಿಕಾರಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಮೈಸೂರು, ಮಾ 16 — ಚಾಮರಾಜ ಆಗ್ರಹಾರದಲ್ಲಿ ಕೋತಿಗಳ ಹಾವಳಿ ವಿಪರೀತವಾಗಿದೆ. ಆವಟ್ಟಿಗೆ ಶ್ರೀ ಶಾಮಾಚಾರ್ ಮತ್ತು ಅರಮನೆ ವಿದ್ವಾಂಸರಾದ ಶ್ರೀ ಕರೂರು ಶೇಷಾಚಾರ್ಯರ ಮಗ ಸಂಪತ್ತು ಎಂಬವನನ್ನು ಪರಚಿ ತೀವ್ರಗಾಯಗೊಳಿಸಿದೆ.

ಕರಾಚಿ, ಮಾ 15 — ಅಗಾಖಾನ ದಂಪತಿಗಳಿಗೆ ಪೌರಸಭೆ ಮಾನಪತ್ರವನ್ನರ್ಪಿಸಿತು.

ಮಡಿಕೇರಿ ಹಳ್ಳಿಯಲ್ಲಿ ನಾಳೆಯ ದಿವಸದಿಂದ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರು ಪ್ರವಾಸ ಮಾಡುವರು.

ಮೈಸೂರು, ಮಾ 16 — ಇದುವರೆವಿಗೆ 72500 ಮಂದಿಗೆ ಸಿಡಿಬು ಹಾಕಿರುವುದಾಗಿ ತಿಳಿಯಬಂದಿದೆ.

ಮೈಸೂರು, ಮಾ 16 — ಈ ದಿವಸ ಬೆಂಗಳೂರಿನಿಂದ ಹೊರಟ ಮೇಲ್ ಬಂಡಿಯು ಇಲ್ಲಿಗೆ 3 ಘಂಟೆಗೆ ಬಂದಿತು.

ಬೊಂಬಾಯಿ, ಮಾ 14 — ಬಾಂಬೆ ದಂಗೆಯ ಸಮಯದಲ್ಲಿ ಶ್ರೀಮತಿ ಅರುಣ ಅಸಫಾಲಿ ದಸ್ತಗಿರಿಯಾಗಬೇಕಿತ್ತೆಂದೂ ಪೈಸ್ಸಾಯರು ಒಪ್ಪಿಗೆ ಕೊಡಲಿಲ್ಲವೆಂದೂ ತಿಳಿಯುಬಂದಿದೆ.

ಬೊಂಬಾಯಿ, ಮಾ 14 — ಮಾವರು ಕ್ರೈಸ್ತ ಸಾಧುಗಳು ಗಾಂಧೀಜೀಯವರಿಗೆ ಪ್ರಾರ್ಥನಾ ಮಾಡಿದರು.

ವಾಷಿಂಗ್ಟನ್, ಮಾ 14 — ಇದೇ ತಾ || 25 ನ್ಯೂಯಾರ್ಕಿನಲ್ಲಿ ವಿಶ್ವಭದ್ರತಾ ಸಮ್ಮೇಳನ ಸೇರುವುದು.

ಕೇಪ್‌ಟೌನ್, ಮಾ 14 — ರಷ್ಯಾಯುದ್ಧಕ್ಕೆ ಹಣವನ್ನು ಕೊಡಲಿಲ್ಲವೆಂದು : ಜ || ಸ್ಮಟ್ಸರ ಅಭಿಪ್ರಾಯವಾಗಿದೆ.

' ನೇತಾಜೀ ಜೀವಿಸಿರುವರು '

" ವಿಪರೀತತ್ವದಿಂದ ನನಗೆ ನೀವು ಏನು ಬೇಕಾದರೂ ಹೇಳಬಹುದು. ಹೃದಯದಲ್ಲಿ ಹೃದಯವನ್ನಿಟ್ಟು, ನೇತಾಜಿ ಸುಭಾಷ್ ಚಂದ್ರ ಬೋಸರು ಸಜೀವಿಗಳಾಗಿರುವುದಾಗಿ ನಾನು ಇನ್ನೂ ನಂಬುತ್ತೇನೆ " ಎಂಬುದಾಗಿ ಮಹಾತ್ಮ ಗಾಂಧೀಜಿಯವರು ಕ್ಯಾ || ಷಾ ನವಾಜ್ ಮತ್ತು ಕ್ಯಾ || ಶೇಗಾಲರೊಡನೆ ಕಳೆದ ತಾ || 13 ರ ರಾತ್ರೆ ಸಂಭಾಷಿಸಿದಾಗ ತಿಳಿಸಿದರೆಂದು, ಕ್ಯಾ || ಶೇಗಾಲ್ ತಮಗೆ ತಿಳಿಸಿದುದಾಗಿ ಯು. ಪಿ. ಐ. ಪ್ರತಿನಿಧಿ ತಿಳಿಸಿರುವರು.

ನಂಜನಗೂಡಿನಲ್ಲಿ ಹೋಟೆಲ್ ಸಂಘ ಸ್ಥಾಪನೆ

——

ಮೇಲ್ಕಂಡ ಸಂಘವು ತಾ || 13-3-46 ರಲ್ಲಿ ಶ್ರೀ ಟಿ. ಸಿ. ಶಿವಶಂಕರಯ್ಯರವರ ಮನೆಯಲ್ಲಿ ಸ್ಥಾಪಿತವಾಯಿತು. ಹೋಟೆಲ್ ಲೆಸೆನ್ಸುದಾರರೆಲ್ಲರೂ ಬಂದಿದ್ದರು. ಮೈಸೂರು ಹೋಟೆಲಿನ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ. ಎನ್. ಸುಬ್ಬಣ್ಣನವರು ಸಂಘದ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಹೆಜ್ಜಿಗೆ ಲಿಂಗಣ್ಣನವರು ಅಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಪಿ. ಸಿ ಶಿವಶಂಕರರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು. ವಂದನೆಯಾದ ಮೇಲೆ ಸಭೆಯು ಮುಗಿಯಿತು.

ಜಿ ಐ. ಪಿ. ರೈಲ್ವೆ ಕೆಲಸಗಾರರ ಸಂಘವು ಮುಂದುವರಿಯುತ್ತಿದೆ.

ಸಂಸ್ಥಾನ ಸುದ್ದಿಗಳು

ಮೈಸೂರು ಸಂಸ್ಥಾನದ ಜೀವವಿಮೆ ಶಾಖೆಯ ಡೆಪ್ಟಿ ಸೆಕ್ರಟರಿಯವರಿಗೆ ತಾ || 18 ರಿಂದ 1 ತಿಂಗಳಕಾಲ ರಜಾ ಕೊಡಲಾಗಿದೆ.

o o

ಬೆಂಗಳೂರಿನ ಅಡ್ವೊಕೇಟರಾದ ಶ್ರೀ ಬಾಪಾ ರೆಡ್ಡಿಯವರನ್ನು ಸಾಗರದ ಎರಡನೇ ದರ್ಜೆ ಮುನ್ಸಿಫರನ್ನಾಗಿ ನೇಮಿಸಲಾಗಿದೆ.

o o

ಆನ್ನ ಡೈರೆಕ್ಟರಾದ ಶ್ರೀ ಸುಂದರರಾಯರು ನಾಡಿದ್ದು ಪತ್ರಿಕಾಗೋಷ್ಟಿ ಕರೆದಿರುವರು.

o o

ರಸಾಯನೀಕ ವಸ್ತು ಮತ್ತು ಬಣ್ಣಗಳನ್ನು ಟೆಕ್ಸ್‌ಟೈಲ ಶಾಖೆ ಅನುಮತಿ ಇಲ್ಲದೆ ವ್ಯಾಪಾರ ಮಾಡಕೂಡದೆಂದು ತಿಳಿಯಬಂದಿದೆ.

ಚೌದ್ರಿ ಅಕ್ಬರ್ ಖಾನ್ ಹೇಳಿಕೆ

ಈಚೆಗೆ ಮತ ಪಾಕ್ಷಿಕ ತ್ವವೆಂಬ ವ್ಯಾಧಿಯನ್ನು ಜಿನ್ನಾರವರು ಇಂಡಿಯಾ ದೇಶಕ್ಕೆ ಬಿಟ್ಟಿದ್ದರು. ಪ್ರಜಾ ಸತ್ತಾತ್ಮಕವಾದ ಇಂಗ್ಲೀಷು ವಾತಾವರಣದಲ್ಲಿ ಲಭಿನೃದ್ಧಿ ಹೊಂದುವ ಸೂಚನೆಗಳು ಕಾಣ ಬರುವುದಿಲ್ಲ. ಇಪ್ಪತ್ತು ವರ್ಷದ ಮುಸ್ಲಿಮರು ಹೇಗೋ ಮುಸ್ಲಿಂ ಲೀಗಿಗೆ ಸೇರಿಕೊಳ್ಳಲು ಶಕ್ತರಾದರು. ಇವರಲ್ಲಿ ಹನ್ನೆರಡು ಮಂದಿಯನ್ನು ಜಿನ್ನಾರವರು ಆಶೀರ್ವಾದ ಮಾಡಿದರಂತೆ. ಇನ್ನು ಇಬ್ಬರು ಪೋಟೋ ಲೀಗನ್ನು ಏರ್ಪಡಿಸಿದರು. ಅವರ ಜಿನ್ನಾರವರ ನಾಯಕತ್ವವನ್ನು ಅಂಗೀಕರಿಸುವುದಿಲ್ಲ. ಇಲ್ಲಿ ಮುಸ್ಲಿಂ ಲೀಗು ಹೆಸರಿಗೆ ಮಾತ್ರ. ಆದರೆ ಭಾರತೀಯ ಪತ್ರಿಕಾ ಪ್ರಪಂಚದಲ್ಲಿ ಅಂದೋಳನೆಯನ್ನುಂಟು ಮಾಡುವ ಕೆಲಸಕ್ಕೆ ಬರುತ್ತದೆ.

ಸು ಭಾ ಷ

ರವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು "ಕಾಂತ್"

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

At Opera — 2 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit From 10-3-46 Shirin Farad

— with —

RAGINI & JAYANT

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು, ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೮-೦ ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ. ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಹಸಕ್ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾಮಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore